ಆ) ಈ ಕೊರತೆಯನ್ನು ತುಂಬುವ ದಿಶೆಯಲ್ಲಿ ಈಗಾಗಲೇ ಕ್ರಮ ಪ್ರಾರಂಭಿಸಲಾಗಿದೆ.

ವಿಷಯ:- ರಾಜ್ಯದಲ್ಲಿರುವ ಪ್ರೌಢಶಾಲಾ ಶಿಕ್ಷಕರ ತರಬೇತಿ ಹೊಂದಿದ ನಿರುದ್ಯೋಗಿಗಳು.

1328 (2314) ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಉದ್ಯೋಗದಲ್ಲಿ ಇರದೇ ಇರುವ, ಪ್ರೌಢಶಾಲಾ ಶಿಕ್ಷಕರ ತರಬೇತಿ ಹೊಂದಿರುವವರ ಸಂಖ್ಯೆ ಎಷ್ಟು?

ಆ) ಇವರಿಗೆ ಉದ್ಯೋಗವನ್ನೊದಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) 50,739

ಆ) ತೆರವಿರುವ ಹುದ್ದೆಗಳಲ್ಲಿ ಅರ್ಹ ಅಭ್ಯರ್ಥಿಗಳನ್ನು ಕಾಲಕಾಲಕ್ಕೆ ನೇಮಕ ಮಾಡಿಕೊಳ್ಳಲಾಗುತ್ತಿದೆ.

ವಿಷಯ:- ಕರ್ನಾಟಕ ಎಜ್ಯುಕೇಷನ್ ಆಕ್ಟ್ 1983.

1330 (1785) ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜ ಪೇಟೆ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಎಜ್ಯುಕೇಷನ್ ಆಕ್ಟ್ 1983 ಈಗ ಜಾರಿಯಲ್ಲಿದೆಯೇ? ಹಾಗಾದರೆ ಈ ಆಕ್ಟ್ ಯಾವ ತಾರೀಖಿನಿಂದ ಜಾರಿಗೆ ಬಂದಿದೆ?

ಆ) ಈ ಆಕ್ಟ್‌ನ ಪ್ರಕಾರವಾಗಿ ಸರ್ಕಾರವು ನಿಯಮಾವಳಿಗಳನ್ನು ರಚಿಸಿದೆಯೇ?

ಇ) ಖಾಸಗಿ ಕಾಲೇಜುಗಳು ವಿದ್ಯಾರ್ಥಿಗಳಿಗೆ ದಾಖಲಾತಿ ನೀಡುವ ಸಂದರ್ಭದಲ್ಲಿ ವಂತಿಗೆಯನ್ನು ಬೇರೆ ಬೇರೆ ರೂಪದಲ್ಲಿ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದು ಮಾನ್ಯತೆಯ ನಿಯಮಾವಳಿಗಳನ್ನು ಉಲ್ಲಂಘಿಸಿದಂತಾಗಲಿಲ್ಲವೇ?

ಈ) ಒಂದು ವೇಳೆ ಆಡಳಿತ ಮಂಡಳಿಯು, ಸ್ಥಳಾವಕಾಶ ಪೀಠೋಪಕರಣಗಳು, ಪೀಠೋಪಕರಣಗಳು, ಪಠ್ಯಸೂಚಿ, ಪಾಠಪುಸ್ತಕಗಳನ್ನು ಒದಗಿಸದಿರುವುದು ಶಿಕ್ಷೆ, ಉಪಾಧ್ಯಾಯರನ್ನು ತೆಗೆದು ಹಾಕುವುದು ಮುಂತಾದವುಗಳನ್ನು ಮಾಡಿದಲ್ಲಿ ಮಾನ್ಯತೆ ರದ್ದುಪಡಿಸಲು ಕಾನೂನಿನಲ್ಲಿ ಅವಕಾಶವಿಲ್ಲವೆ? ಹಾಗಿದ್ದಲ್ಲಿ ರಾಜ್ಯದಲ್ಲಿರುವ ಎಲ್ಲಾ ಸಂಸ್ಥೆಗಳೂ ಮೇಲ್ಕಂಡ ನಿಯಾಮಾವಳಿಗಳಂತೆ ನಡೆಯುತ್ತಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಹೌದು ಇದನ್ನು 1-6-95 ರಿಂದ ಜಾರಿಗೆ ತರಲಾಗಿದೆ.